ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ: 91/2025</u>**

ಪ್ರ.ವ.ಬೋ.ತಾಃ 22-07-2026

ಚಾಸಾಃ 7 ಫ್ರಾಸಾಃ 7

| | |
|---|---|
| ಸಾಕ್ಷಿಯ ಹೆಸರು | ರಮೇಶ್ ಆಚಾರ್ |
| ತಂದೆ/ಗಂಡನ ಹೆಸರು | ಜಯಶಂಕರಾಚಾರ್ |
| ವಯಸ್ಸು | 50 ವರ್ಷ |
| ವೃತ್ತಿ | ಅಕ್ಕಸಾಲಿಗ ಕೆಲಸ |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನನಗೆ ಆರೋಪಿ ಗೊತ್ತು. ಈಗ ತೋರುತ್ತಿರುವ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.18 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.18(ಸಿ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ಕಳೆದ ಒಂದು ವರ್ಷದ ಹಿಂದೆ ಮಧುಗಿರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆಗ ಸಮಯ ಎಷ್ಟು ಗಂಟೆ ಆಗಿತ್ತು ಎಂಬುದು ಈಗ ನೆನಪಿಲ್ಲ. ಆ ಸಮಯದಲ್ಲಿ ನಾನು ಪೊಲೀಸರು ಆರೋಪಿಯಿಂದ 52 ಗ್ರಾಂ 360 ಮಿಲಿ ಗ್ರಾಂ ತೂಕದ ಒಂದು ಬಂಗಾರದ ಎರಡು ಎಳೆ ಮಾಂಗಲ್ಯ ಸರವನ್ನು ತೂಕ ಮಾಡಿ ಕೊಡುವಂತೆ ಹೇಳಿದ್ದು ಅದರಂತೆ ನಾನು ತೂಕ ಮಾಡಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಅಮಾನತ್ತು ಪಂಚನಾಮೆ ಮಾಡಿ ಒಂದು ಹೀರೋ ಹೊಂಡಾ ದ್ವಿಚಕ್ರ ವಾಹನ, ಒಂದು ಹೆಲ್ಮೆಟ್, ಎರಡು ಖಾರದ ಪುಡಿ ಪ್ಯಾಕೆಟ್ ಗಳನ್ನು ಹಾಗೂ ಒಂದು

ಕಟ್ಟಿಂಗ್ ಪ್ಲೇಯರ್ ನ್ನು ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ 3 ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ನಿಪಿ.14, 19 ಮತ್ತು 20 ಈಗಾಗಲೇ ಗುರುತಿಸಲಾಗಿದೆ. ಆ ದಿನ ನಾನು ತೂಕ ಮಾಡಿದ ಬಂಗಾರದ ಮಾಂಗಲ್ಯ ಸರವನ್ನು ಫೋಟೋದಲ್ಲಿ ನೋಡಿ ಗುರುತಿಸುತ್ತೇನೆ. ಆ ಫೋಟೋವನ್ನು ನಿಪಿ.11 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಹೆಲ್ಮೆಟ್ ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.01 ಎಂದು, ಆ ಕಟ್ಟಿಂಗ್ ಪ್ಲೇಯರ್ ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.02 ಎಂದು, ಆ ಎರಡು ಖಾರದ ಪುಡಿ ಪ್ಯಾಕೆಟ್ ಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಮು.ಮಾ.03 ಎಂದು ಈಗಾಗಲೇ ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸ.ಸ.ಅ. ರವರಿಂದಃ–**

ದಿಃ 04.06.2025 ರಂದು ಪೊಲೀಸರು ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ಬಂಗಾರದ ಮಾಂಗಲ್ಯ ಸರವನ್ನು ತೂಕ ಮಾಡಲು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ.4 ಮತ್ತು 6 ರವರು ಆ ಸ್ಥಳದಲ್ಲಿದ್ದರು ಎಂದರೆ ಸರಿ. ಆ ದಿನ ಆರೋಪಿ ಚಾಸಾ.1 ರವರ ಕೊರಳಿಲ್ಲಿದ್ದ ಮಾಂಗಲ್ಯದ ಸರವನ್ನು ದಿಃ 02.06.2025 ರಂದು ಬೆಳಗ್ಗೆ 11.40 ಗಂಟೆ ಸಮಯದಲ್ಲಿ ಅವರ ತೋಟದ ಮನೆಯಲ್ಲಿ ಕಳ್ಳತನ ಮಾಡಿದ್ದು, ಆ ಬಂಗಾರದ ಸರ 52 ಗ್ರಾಂ 39 ಮಿಲಿ ಗ್ರಾಂ ತೂಕದ ಬಟಾಣಿ ಡಿಸೈನ್ ಸರವಾಗಿತ್ತು ಎಂದರೆ ಸರಿ. ಅದರ ಮೌಲ್ಯ ರೂ.5,50,000/– ಆಗುತ್ತಿತ್ತು ಎಂದರೆ ಸರಿ. ಆರೋಪಿ ಕೃತ್ಯಕ್ಕೆ ಬಳಸಿದ

ದ್ವಿಚಕ್ರ ವಾಹನ ಸಂಃ ಕೆಎ-64-ಎಲ್-3453 ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ.

ಆಗ ಸಮಯ ಮಧ್ಯಾಹ್ನ 3.30 ರಿಂದ 4.30 ಗಂಟೆ ಆಗಿತ್ತು ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿತರ ಪರ ವಕೀಲರಿಂದಃ-**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂ.200/-ರ ಖರ್ಚಿನ ಸಹಿತ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ